# ಮೊಟ್ಟೆತ್ತಡ್ಕ: ಗೇರು ಸಂಶೋಧನ ಕೇಂದ್ರಕ್ಕೆ ರಮಾನಾಥ ರೈ ಭೇಟಿ

**ನಗರ** ಜೂ. 27: ಮೊಟ್ಟೆತ್ತಡ್ಕದಲ್ಲಿರುವ ರಾಷ್ಟ್ರೀಯ ಗೇರು ಸಂಶೋಧನ ಕೇಂದ್ರಕ್ಕೆ ಮಾಜಿ ಅರಣ್ಯ ಸಚಿವ ಬಿ. ರಮಾನಾಥ ರೈ ಅವರು ಗುರುವಾರ ಭೇಟಿ ನೀಡಿ, ಅಧಿಕಾರಿಗಳೊಂದಿಗೆ ಚರ್ಚಿಸಿದರು.

ಗೇರು ತೋಟದ ಬೆಳೆಸುವಿಕೆ, ತಳಿ ಗುಣ ಧರ್ಮಗಳು, ಭೂಮಿ ತಯಾರಿ, ಗೊಬ್ಬರ ಮತ್ತು ಕೀಟ, ರೋಗ ನಿರ್ವಹಣೆ ಮತ್ತು ಮಾರುಕಟ್ಟೆಯ ಕುರಿತು ಮಾಹಿತಿ ಪಡೆದರು. ಹೊಸ ಹೈಬ್ರಿಡ್ ತಳಿಯಾದ ಎಚ್-130 ಕುರಿತು ಮಾಹಿತಿ ಪಡೆದು, ಅದರ ಗುಣಧರ್ಮಗಳ ಮತ್ತು ನಿರ್ವಹಣೆ ಕುರಿತು ಬಹಳ ಆಸಕ್ತಿಯಿಂದ ಆಲಿಸಿದರು.

ಜತೆಗೆ ಘನಸಾಂದ್ರ ಪದ್ಧತಿ ಕೃಷಿಯ ಕುರಿತು ವಿಚಾರಿಸಿ, ಮೂರು ಎಕರೆ ಜಾಗದಲ್ಲಿ ಕೃಷಿ ಮಾಡುವ ಕುರಿತು ಮಾಹಿತಿ ಪಡೆದು ಗಿಡಗಳನ್ನು ತೆಗೆದುಕೊಳ್ಳುವ ಆಸಕ್ತಿ ವ್ಯಕ್ತಪಡಿಸಿದರು. ಕೊಯಿಲಿನ ಅನಂತರ ಸಂಸ್ಕರಣೆ ಹಾಗೂ ಗೇರು ಹಣ್ಣಿನ ಉಪಯೋಗದ ಕುರಿತು ವಿಚಾರಿಸಿದರು.

ಗೇರು ಹಣ್ಣಿನಿಂದ ತಯಾರಿಸಿದ ಜ್ಯೂಸ್, ಜಾಮ್, ಜೆಲ್ಲಿ, ಕುರ್ಕುರೆ, ಮೌತ್ ಫ್ರೆಶ್ನರ್ ಮುಂತಾದ ಉತ್ಪನ್ನಗಳನ್ನು ವೀಕ್ಷಿಸಿ, ಮೆಚ್ಚುಗೆ ಸೂಚಿಸಿದರು. ಸಂಸ್ಥೆಯ ಬೆಳವಣಿಗೆ ಹಾಗೂ ಸಾಧನೆಯನ್ನು ಶ್ಲಾಘಿಸಿದರು. ನಿರ್ದೇಶಕ ಡಾ| ಎಂ.ಜಿ.ನಾಯಕ್, ವಿಜ್ಞಾನಿಗಳಾದ ಡಾ| ಸಂಶುದ್ದೀನ್, ಡಾ| ಪ್ರೀತಿ ಮಾಹಿತಿ ನೀಡಿದರು. ಕಾವು ಹೇಮನಾಥ ಶೆಟ್ಟಿ ಪ್ರಸಾದ್ ಕೌಶಲ್ ಶೆಟ್ಟಿ ನೇಮಾಕ್ಷ ಸುವರ್ಣ ರೈ ಅವರ ಜತೆಗಿದ್ದರು.



ಅಧಿಕಾರಿಗಳೊಂದಿಗೆ ಚರ್ಚಿಸುತ್ತಿರುವ ರಮಾನಾಥ ರೈ.